

# ಗುಡ್ಡೆಗೇರಿನ ಮರ ನೆನಪಾದ ಹಣ್ಣಿನ ಹಾರ

ಅಟ್ಟದಲ್ಲಿದ್ದ ಬುಟ್ಟಿಯೊಳಗೆ ನಾರಿನಲ್ಲಿ ಪೋಣಿಸಿಟ್ಟಿರುತ್ತಿದ್ದ ಹಾರದಿಂದ ಅಜ್ಜ–ಅಜ್ಜಿ ಒಂದೊಂದೇ ಬಿಚ್ಚಿಬಿಚ್ಚಿ ಕೊಡುತ್ತಿದ್ದ ಗುಡ್ಡೆಗೇರಿನ ಹಣ್ಣಿನ ರುಚಿಯ ಜೊತೆಗೆ ಅವರ ಪ್ರೀತಿಯೂ ಬೆರೆತು ವಿಶೇಷ ಅನುಭವ ನೀಡುತ್ತಿತ್ತು. ಈಗ ಗುಡ್ಡೆಗೇರು ವಿರಳ, ಗೇರುಹಣ್ಣಿನ ಹಾರವಂತೂ ಕೇವಲ ನೆನಪು...

■ ವಿನು ಗಂಗೆ

ಬಾಲ್ಯದಲ್ಲಿ ನಾವು ಅಜ್ಜನ ಮನೆಗೆ ಹೋದಾಗ ಅಟ್ಟ ಎನ್ನುವುದು ಚುಂಬಕಶಕ್ತಿಯ ವಿಸ್ಮಯ ತಾಣವಾಗಿತ್ತು. ಬೇಸಿಗೆ ರಜೆಗೆ ಬಂದಾಗ ಅಜ್ಜ ಅಜ್ಜಿಯ ಹಿಂದೆ ಮರದ ಏಣಿ ಹತ್ತಿ ಹೋದರೆ ಮೇಲೆ ತೆರೆದುಕೊಳ್ಳುತ್ತಿದ್ದ ಮಬ್ಬು ಬೆಳಕಿನ ಲೋಕದಲ್ಲಿ, ಒಣಹುಲ್ಲು ತುಂಬಿ ಒತ್ತೆಗೆ ಇಟ್ಟ ಮಾವಿನಕಾಯಿ ಬುಟ್ಟಿಗಳೂ, ಉಪ್ಪಿನಕಾಯಿ ಭರಣಿಗಳೂ, ಹಪ್ಪಳದ ಡಬ್ಬ, ಹುಣಸೆ ಹಣ್ಣು, ಜೊತೆಗೆ ಇನ್ನೂ ಏನೇನೋ ಅರ್ಥವಾಗದ ವಸ್ತುಗಳೂ ಅಲ್ಲಿರುತ್ತಿದ್ದವು.

ಅಜ್ಜ–ಅಜ್ಜಿ ಕೈ ಹಾಕಿದಾಗ ಮಾತ್ರ ಗೋಣಿ ಚೀಲದ ಕೆಳಗಿಂದ, ಬುಟ್ಟಿಯ ಒಣ ಹುಲ್ಲಿನ ಒಳಗಿಂದ ಅವೂ ಇವೂ ವಸ್ತುಗಳು ಮಂತ್ರಿಸಿದಂತೆ ಪ್ರತ್ಯಕ್ಷವಾಗುತ್ತಿದ್ದವು. ಅಟ್ಟದಲ್ಲಿದ್ದ ಸಣ್ಣ ಗವಾಕ್ಷಿಯಿಂದ ತೂರಿ ಬರುತ್ತಿದ್ದ ಬೆಳಕಿನ ಕೋಲಲ್ಲಿ ಮಿನುಗುತ್ತಾ ತೇಲಿಹೋಗುವ ದೂಳಿನ ಕಣಗಳನ್ನು ಬೆರಗುಗಣ್ಣಿನಿಂದ ಹಿಂಬಾಲಿಸಿ ಆ ಕಡೆಯಿಂದ ಈ ಕಡೆ ತಿರುಗುವಷ್ಟರಲ್ಲಿ ಅಜ್ಜ ಅಜ್ಜಿಯ ಕೈಯಲ್ಲಿ ಪ್ರತ್ಯಕ್ಷವಾಗುತ್ತಿದ್ದ ಇನ್ನೊಂದು ವಸ್ತು ಎಂದರೆ ಗುಡ್ಡೆಗೇರಿನ ಹಾರ!

ಹಾರ ಎಂದರೆ ಸಾಮಾನ್ಯವಾಗಿ ಕತ್ತಿಗೆ ಹಾಕುವ ಆಭರಣ ಅಂತ ಮಾತ್ರ ತಿಳಿದಿದ್ದ ನಮಗೆ ಅಟ್ಟದ ಮೇಲೆ ಮಬ್ಬುಗತ್ತಲಿನಲ್ಲಿದ್ದ ಬುಟ್ಟಿಯೊಳಗೆ ನಾರಿನಲ್ಲಿ ಪೋಣಿಸಿ ಕಟ್ಟಿರುತ್ತಿದ್ದ ಹಾರದಿಂದ ಅಜ್ಜ–ಅಜ್ಜಿ ಒಂದೊಂದೇ ಬಿಚ್ಚಿಬಿಚ್ಚಿ ಕೊಡುತ್ತಿದ್ದ ಗುಡ್ಡೆಗೇರಿನ ಹಣ್ಣಿನ ರುಚಿಯ ಜೊತೆಗೆ ಅವರ ಪ್ರೀತಿಯೂ ಬೆರೆತು ವಿಶೇಷ ಅನುಭವ ನೀಡುತ್ತಿತ್ತು. ಈಗ ನೆನಪಿಸಿಕೊಂಡರೂ ಆ ಗುಡ್ಡೆಗೇರಿನ ಹಣ್ಣಿನ ಹಾರ, ಆಭರಣದ ಹಾರಕ್ಕಿಂತ ಅಮೂಲ್ಯ, ಅವಿಸ್ಮರಣೀಯ ಎನಿಸಿ ಮನಸು ತುಂಬಿ ಬರುತ್ತದೆ.

ಈಗ ಗುಡ್ಡೆಗೇರು ಮರಗಳೂ ವಿರಳ, ಗೇರುಹಣ್ಣಿನ ಹಾರವಂತೂ ಕೇವಲ ನೆನಪು. ಗುಡ್ಡೆಗೇರು, ಗೋಡಂಬಿಯ (ಗೇರು) ಹತ್ತಿರದ ಸಂಬಂಧಿಯಾದರೂ ಹಣ್ಣಿನಿಂದ ಹೊರಬಂದಂತೆ ಕಾಣುವ ಇದರ ಕಪ್ಪು ಬೀಜ ತಿನ್ನಲು ಬರುವುದಿಲ್ಲ, ವಿಷ. ಆದರೆ ಹಣ್ಣು ಮಾತ್ರ ಒಣಗಿಸಿ ತಿಂದರೆ ತುಂಬಾ ರುಚಿ. ಆಯುರ್ವೇದದಲ್ಲಿ ಈ ಹಣ್ಣು ಮೂಲವ್ಯಾಧಿಗೆ ಪರಿಣಾಮಕಾರಿ ಔಷಧಿಯಾಗಿ ಬಳಕೆಯಲ್ಲಿದೆ.

ಗೋಡಂಬಿ ಹಣ್ಣಿಗಿಂತ ಚಿಕ್ಕ ಹಣ್ಣಿದು. ಸಾಧಾರಣ ಎತ್ತರದ ದೊಡ್ಡ ಎಲೆಗಳ ಗುಡ್ಡೆಗೇರಿನ ಮರ ಗೋಡಂಬಿ ಮರದಂತೆ ಅಂಕುಡೊಂಕಾಗಿ ಬೆಳೆಯದೇ ಚೆಂದವಾಗಿ ಬೆಳೆಯುತ್ತದೆ. ಬೇಸಿಗೆ ಹೊತ್ತಿಗೆ ಸಾಮಾನ್ಯವಾಗಿ ಕೊಂಬೆಗಳನ್ನು ಕಟ್ಟಿಗೆಗೆ ಕಡಿಯುವುದರಿಂದ ಅಲ್ಲಲ್ಲಿ ಉಳಿದ ಮರಗಳೂ ಮೂಲ ಸ್ವರೂಪ ಕಳೆದುಕೊಂಡು ಕಾಂಡದಲ್ಲಿ ಕೆಲವು ಚಿಗುರುಗಳನ್ನು ಅರಳಿಸಿ ಉಳಿಯುವ ಪ್ರಯತ್ನ ಮಾಡುತ್ತಿರುತ್ತವೆ.



ಗುಡ್ಡೆಗೇರಿನ ವೈಜ್ಞಾನಿಕ ಹೆಸರು **Semecarpus anacardium.** ಅದು **'Marking nut'** ಎಂದು ಇಂಗ್ಲಿಷ್‌ನಲ್ಲಿ ಪ್ರಸಿದ್ಧಿ. ಯಾಕೆಂದರೆ, ಇದರ ಬೀಜದಿಂದ ಒಸರುವ ಕಪ್ಪು ಮಸಿ ಬಟ್ಟೆಗೆ ಹಾಕಿದಾಗ ನೀರಲ್ಲಿ ಒಗೆದರೂ ಕರಗದು. ಈ ಗುಣದಿಂದಾಗಿ ಬಟ್ಟೆಯನ್ನು ಗುರುತು ಹಾಕಲು ಧೋಬಿಗಳು ಬಳಸುತ್ತಿದ್ದರು. ಆದರೆ ಈ ಬೀಜದ ಸೊನೆ ಕೈಗೆ ಸೋಕಿದರೆ ತೀವ್ರ ಕೆರೆತ, ಅಲರ್ಜಿ ಹಾಗೂ ಬೊಬ್ಬೆಗಳು ಉಂಟಾಗುತ್ತದೆ.

ದೀಪಾವಳಿ ಸಮಯದಲ್ಲಿ ಕಾಯಿ ಬಿಡುತ್ತದೆ. ನಮ್ಮ ಊರಲ್ಲಿ ದೀಪಾವಳಿ ಹಬ್ಬದ ಬಲೀಂದ್ರ ಪೂಜೆಗೆ ನೆಲ್ಲಿಕಾಯಿ, ಹಿಂಡಲಚ್ಚಿಕಾಯಿ ಜೊತೆಗೆ ಈ ಕಾಯಿ ಇಡುತ್ತಾರೆ. ಬೀಜಗಳು ನೂರಾರಿದ್ದರೂ ಸಸಿಯಾಗುವುದು ಬಹಳ ಕಡಿಮೆ. ಆದರೂ ಹಾಕಿದ ಕೆಲವು ಬೀಜಗಳು ಸಸಿಯಾಗಿ ನಮ್ಮ ತೋಟದಂಚಿನಲ್ಲಿ ಬೆಳೆಯುತ್ತಿವೆ.

ನೀಲಗಿರಿ, ಅಕೇಶಿಯ, ಹೆಬ್ಬೇವು, ಸುಬಾಬುಲ್, **Rain tree, silver oak, tabebuia, African tulip,** ಮಹಾಗನಿಯಂತಹ ಮರಗಳು ಜೀವಕೊಂಡಿಗೆ ಹೆಚ್ಚಿನ ಕೊಡುಗೆಯನ್ನೇನೂ ನೀಡುವುದಿಲ್ಲ. ಈಗ ರಸ್ತೆ ಬದಿಯಲ್ಲಿ ಹಾಗೂ ಸರ್ಕಾರ ಬೆಳೆಸಿದ ಕಾಡುಗಳಲ್ಲಿ ಈ ಮರಗಳದ್ದೇ ಸಿಂಹಪಾಲು. ವೇಗವಾಗಿ ಬೆಳೆಯುವುದೊಂದನ್ನೇ ಮಾನದಂಡವಾಗಿಸಿ ಇಂತಹ ಮರಗಳ ನೆಡುತೋಪು ಮಾಡುವುದಕ್ಕಿಂತ ನಮ್ಮದೇ ಆದ ಗುಡ್ಡೆಗೇರು, ಜಂಬೆ, ಬಸರಿ, ಹುಣಸೆ, ಜಾಲಗರಿ, ಆಲ, ಧೂಪ, ರಂಜ, ದೇವದಾರು, ಪುತ್ರಂಜೀವ ಇಂತಹ ಸಾವಿರಾರು ವೈವಿಧ್ಯಮಯ ದೇಸಿ ಮರಗಳ ಉಳಿವು, ಬೆಳವಿಗೆ ಆದ್ಯತೆ ನೀಡಿದಾಗ ಮಾತ್ರ ಅರಣ್ಯ ಕೃಷಿ ತನ್ನ ನಿಜವಾದ ಅರ್ಥ ಪಡೆದುಕೊಳ್ಳುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**